ಆರ್ಡರ್ ಬಹಳ ಮಹತ್ವದ ವಿಚಾರವಾಗಿದ್ದು, ಅದಕ್ಕೆ ನಾವು ಹೆಚ್ಚು ಆದ್ಯತೆ ಕೊಡಬೇಕಾಗುತ್ತದೆ ಮತ್ತು ಗಡಿ ಭಾಗದಲ್ಲಿರುವ ಚಾಮರಾಜನಗರ ಜಿಲ್ಲೆಗೆ ನಾವು ವಿಶೇಷ ಗಮನಕೊಡಬೇಕಾಗಿದೆ. ಆ ಭಾಗದಲ್ಲಿಯೇ ಇಂತಹ ಕುಕೃತ್ಯದಂಥ ಪ್ರಯತ್ನಗಳು ನಡೆಯುತ್ತಿರುವುದು. ಇದರ ಬಗ್ಗೆ, ಸರ್ಕಾರ ಸದಾ ಗಮನದಲ್ಲಿಟ್ಟುಕೊಂಡು ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ. ಮಾನ್ಯ ಸದಸ್ಯರಾದ ರಾಮದಾಸ್‌ರವರು ಮಾತನಾಡುತ್ತಾ, ಕರ್ನಾಟಕದಲ್ಲಿ 26ನೇ ತಾರೀಖಿನಂದು ಎಲ್ಲೋ ಒಂದು ಕಡೆ ಸಭೆ ನಡೆಯುತ್ತದೆಂದು ಹೇಳಿದರು. ಕರ್ನಾಟಕದಲ್ಲಿ ಆ ಸಭೆ ನಡೆಯುತ್ತದೆಯೇ?

ಶ್ರೀ ಎ. ರಾಮದಾಸ್ :— ಜರುಗುತ್ತಿರುವ ಸಭೆಯ ವಿವರಗಳುಳ್ಳ ಕರಪತ್ರಗಳ ಮೇಲೆ ಎಲ್‌ಟಿಟಿಇ ಚಿಹ್ನೆ ಇದ್ದು, ಇದನ್ನು ಮೈಸೂರು ಮತ್ತು ಆದರ ಸುತ್ತಮುತ್ತಲ ಪ್ರದೇಶಗಳಲ್ಲಿ ಹಂಚಿದ್ದಾರೆ. ಈ ರೀತಿಯ ಚಟುವಟಿಕೆಗಳಾಗಬಾರದೆಂಬುದೇ ನನ್ನ ಕಳಕಳಿ.

ಶ್ರೀ ಎಸ್.ಎಂ. ಕೃಷ್ಣ :— ತಾವು ಏನು ಹೇಳಿದ್ದೀರಿ, ಇದರ ಮೇಲೆಯೂ ಕೂಡ ನಿಗಾ ಇಡಬೇಕೆಂದು ನಾನು ಸಂಬಂಧಪಟ್ಟವರಿಗೆ ತಿಳಿಸುತ್ತೇನೆ.

(6) ಶಾಸನ ರಚನೆ

ಅ) ವಿಧೇಯಕವನ್ನು ಮಂಡಿಸುವುದು

(1) ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕ, 2000 ಮಂಡನೆಗೆ ಅನುಮತಿ ಕೋರಿಕೆ.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.

ಅಧ್ಯಕ್ಷರು :— ಪ್ರಸ್ತಾವ ಏನೆಂದರೆ "2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ನೀಡುವುದು."

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು :— ವಿಧೇಯಕವನ್ನು ಮಂಡಿಸಲಾಗಿದೆ. - **ಅನುಬಂಧ - ೨**

ಅ) ವಿಧೇಯಕವನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕ, 2000 ಪರ್ಯಾಲೋಚನಾ ಪ್ರಸ್ತಾವ

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, 2000ದ ಕರ್ನಾಟಕ ಮಾರಾಟ ತೆರಿಗೆ ಮತ್ತು ಅಬಕಾರಿ ಕಾನೂನುಗಳ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವ ಮಂಡಿಸಲಾಯಿತು

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿ) :— ಮಾನ್ಯ ಅಧ್ಯಕ್ಷರೆ, ಸದರಿ ವಿಧೇಯಕದ ಮುಖ್ಯ ಉದ್ದೇಶವೇನೆಂದರೆ, ನಮ್ಮ ನಿಯಮಗಳನ್ನು ಆದಷ್ಟು ಸರಳೀಕರಣಗೊಳಿಸಬೇಕು ಮತ್ತು Increased compliance in the collection of Excise Duty and Sales Tax on IML, rectified spirit, beer, fenny, wine through one agency. ಇದುವರೆಗೂ ಪದ್ಧತಿ ಏನಿತ್ತು ಎಂದರೆ, ಕಳೆದ ಹಲವಾರು ವರ್ಷಗಳಿಂದ ನಮ್ಮ ಇಂಡಿಯನ್ ಮೇಡ್ ಲಿಕ್ಕರ್, ರೆಕ್ಟಿಫೈಡ್ ಸ್ಪಿರಿಟ್, ಬೀರ್ ಮುಂತಾದ ಪದಾರ್ಥಗಳ ಮೇಲೆ ಎರಡು ರೀತಿಯ ಕಡಿವಾಣಗಳಿದ್ದವು, ಮೊದಲನೆಯದು, ಎಕ್ಸೈಸ್ ಇಲಾಖೆ ಅದನ್ನು ನಿಯಂತ್ರಣ ಮಾಡಲು ಪ್ರಯತ್ನಿಸುತ್ತದೆ, ಎರಡನೆಯದು, ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್ ಕಡಿವಾಣ ಹಾಕುತ್ತದೆ. ಈ ಪದಾರ್ಥಗಳನ್ನು ತಯಾರಿಸುವ ಸಂಸ್ಥೆಗಳನ್ನು ನಡೆಸುತ್ತಿರುವವರು ಕಳೆದ ಮೂರ್ನಾಲ್ಕು ವರ್ಷಗಳಿಂದಲೂ ಈ ವಿಚಾರದಲ್ಲಿ ಹಿಂದಿನ ಸರ್ಕಾರವನ್ನು ಕೂಡ ಅಪ್ರೋಚ್ ಮಾಡಿದ್ದರು. 'ಏನೆಂದರೆ, ನಿಯಮಗಳನ್ನು ಸರಳೀಕರಣಗೊಳಿಸಿ ಎಕ್ಸೈಸ್ ಡಿಪಾರ್ಟ್‌ಮೆಂಟ್‌ಗೆ ಸಂಪೂರ್ಣ ಅಧಿಕಾರ ಕೊಡಬೇಕು. ಈಗಾಗಲೇ ಇದು ಮಹಾರಾಷ್ಟ್ರ ರಾಜ್ಯದಲ್ಲಿ ಜಾರಿಯಲ್ಲಿದ್ದು, ಮಹಾರಾಷ್ಟ್ರದಲ್ಲಿ ಇದು ಸಾಧ್ಯವಾಗಬಹುದಾದರೆ, ನಮ್ಮ ರಾಜ್ಯದಲ್ಲೂ ಕೂಡ ಸರಳೀಕರಣ ಮಾಡುವುದರ ಮೂಲಕ ನಮಗಾಗುತ್ತಿರುವ ಕಿರುಕುಳಗಳಿಂದ ನಮ್ಮನ್ನು ಪಾರು ಮಾಡಬೇಕು' ಎಂದು ಕೇಳಿದ್ದಕ್ಕೆ ನಾನು ಅದಕ್ಕಾಗಿ ಒಂದು ಷರತ್ತು ವಿಧಿಸಿದ್ದೇನೆ. ಏನೆಂದರೆ, 'ನಾವು ಇವೆರಡನ್ನೂ ಜೋಡಿಸುವಂಥ ಕೆಲಸ ಮಾಡಬೇಕಾಗಿದ್ದರೆ, ವರ್ಷವೊಂದಕ್ಕೆ ನೀವು ಶೇಕಡ 20ರಷ್ಟು ಜಾಸ್ತಿ ವರಮಾನವನ್ನು ನಮಗೆ ಕೊಡುವುದಕ್ಕೆ ಸಿದ್ಧರಾಗಿರಬೇಕು. ಹಾಗೆ ನೀವು ಮಾಡುವುದಾದರೆ ಆರು ತಿಂಗಳ ಮಟ್ಟಿಗೆ ಒಂದು ರೀತಿಯ ಎಕ್ಸ್‌ಪೆರಿಮೆಂಟಲ್ ಬೇಸಿಸ್ ಮೇಲೆ ನೀವು ಸರಳೀಕರಣಕ್ಕೆ ಒಪ್ಪುತ್ತೇವೆ' ಎಂದು ಹೇಳಿದಾಗ, ಅವರೆಲ್ಲರೂ ಕೂಡ ಕನಿಷ್ಠ ಶೇಕಡ 20ರಷ್ಟು ಜಾಸ್ತಿ